ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (420)341
ಸದಸ್ಯರ ಹೆಸರು : ಶ್ರೀ ಸೋಮಣ್ಣ ಎ.
(ಗೋವಿಂದರಾಜ ನಗರ)
ಉತ್ತರಿಸುವ ಸಚಿವರು : (ಶ್ರೀ ಅರವಿಂದ ಲಿಂಬಾವಳಿ)
ಉನ್ನತ ಶಿಕ್ಷಣ ಸಚಿವರು

ಅ) ತುಮಕೂರು ವಿಶ್ವವಿದ್ಯಾಲಯ ಯಾವಾಗ ಪ್ರಾರಂಭವಾಯಿತು;

ದಿನಾಂಕ:20–3–2004 ರಿಂದ ಪ್ರಾರಂಭವಾಗಿದೆ

ಆ) ಈ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣಕ್ಕೆ ಸರ್ಕಾರ ಇದುವರೆಗೆ ಖರ್ಚು ಮಾಡಿದ ಹಣವೆಷ್ಟು;

ಇಲ್ಲ

ಇ) ಈ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಹಿನ್ನೆಡೆಗೆ ಕಾರಣಗಳೇನು;

ತುಮಕೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಸೂಕ್ತ ಭೂಮಿ ಲಭ್ಯವಾಗದ ಕಾರಣದಿಂದ ನಿರ್ಮಾಣ ಸಾಧ್ಯವಾಗಲಿಲ್ಲ. ಈಗ ಭೂಮಿ ಮಂಜೂರಾಗಿರುತ್ತದೆ.

ಈ) ಈ ವಿಶ್ವವಿದ್ಯಾಲಯಕ್ಕೆ ನೀಡಿದ ಜಮೀನೆಷ್ಟು ಹಾಗೂ ಎಷ್ಟು ಎಕರೆ ಜಮೀನನ್ನು ವಾಪಾಸ್ಸು ಪಡೆಯಲು ಸರ್ಕಾರ ನಿರ್ಧರಿಸಿದೆ;

1) ಈ ಹಿಂದೆ ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕು ಊರ್ಡಿಗೆರೆ ಗ್ರಾಮದಲ್ಲಿ ನೀಡಿದ ಜಮೀನು 75 ಎಕರೆ.

2) ಈಗ ತುಮಕೂರು ತಾಲ್ಲೂಕು ಹೆಬ್ಬೂರು ಹೋಬಳಿ ಬಿದರಿಕೆಟ್ಟೆ, ತಮ್ಮಸಂದ್ರ ಹಾಗೂ ದೊಮ್ಮನಕುಪ್ಪೆ ಗ್ರಾಮಗಳ ವ್ಯಾಪ್ತಿಯಲ್ಲಿ 242.10 ಎಕರೆ ಭೂಮಿಯನ್ನು ಮಂಜೂರು ಮಾಡಿದೆ.

3) ಈಗ ಮಂಜೂರು ಮಾಡಿರುವ ಭೂಮಿಯಲ್ಲಿ ಯಾವುದೇ ಭೂಮಿಯನ್ನು ವಾಪಾಸ್ಸು ಪಡೆಯುವ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ

ಉ) ಈ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಕಾರ್ಯ ಯಾವಾಗ ಪೂರ್ಣಗೊಳಿಸಲಾಗುವುದು?

ಈಗ ಮಂಜೂರಾಗಿರುವ ಭೂಮಿಯ ಬಗ್ಗೆ ಅರಣ್ಯ ಮತ್ತು ಪರಿಸರ ಇಲಾಖೆಯು ಅನುಮತಿ ನೀಡಿದ ಕೂಡಲೇ ಹಾಗೂ ಹಣಕಾಸಿನ ಲಭ್ಯತೆಗನುಗುಣವಾಗಿ ಕ್ಯಾಂಪಸ್‌ನ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (442)342
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ,(ಮಂಡ್ಯ)
ಉತ್ತರಿಸುವ ಸಚಿವರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)

ಮಾನ್ಯ ವಸತಿ ಮತ್ತು ಮುಜರಾಯಿ
ಸಚಿವರು

ಅ) ಮಂಡ್ಯ ನಗರ ವ್ಯಾಪ್ತಿಯ ಕೊಳಚೆ ಪ್ರದೇಶದ ಬಡ ನಿವಾಸಿಗರಿಗೆ ಮನೆಗಳನ್ನು ಕಟ್ಟಿಕೊಡುವ ಸರ್ಕಾರದ ಯೋಜನೆಗಳ ವಿವರಗಳೇನು;

ಮಂಡ್ಯ ನಗರ ವ್ಯಾಪ್ತಿಯ ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಿವಿಧ ಯೋಜನೆಗಳಡಿ– ಹುಡ್ಕೋ–1065, ವಾಂಬೆ–166, ಎಸ್‌ಸಿಪಿ–292, ನಗರ ಆಶ್ರಯ–100 ಒಟ್ಟು–1623 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿರುತ್ತದೆ. ಕೇಂದ್ರ ಪುರಸ್ಕೃತ ಕೇಂದ್ರ ಸರ್ಕಾರದ ಜನಹರಲಾಲ್ ನೆಹರು ನಗರ ನವೀಕರಣ ಯೋಜನೆಯ (ಜೆ.ಎನ್.ಎನ್.ಯು.ಆರ್.ಎಂ) ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (ಐ.ಹೆಚ್.ಎಸ್.ಡಿ.ಪಿ) ಯೋಜನೆಯಡಿ 558 ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯ ಒದಗಿಸುವ ರೂ.15.44 ಕೋಟಿ ವೆಚ್ಚದ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಪರಿಶೀಲನೆಗೆ ಹಾಗೂ ಮಂಜೂರಾತಿಗೆ ಸಲ್ಲಿಸಲಾಗಿದೆ.

ಆ ಇಲ್ಲಿಯವರೆಗೆ ಎಷ್ಟು ನಿವಾಸಿಗರಿಗೆ ಮನೆಗಳನ್ನು ಒದಗಿಸಿಕೊಡಲಾಗಿದೆ; ಉಳಿದವರಿಗೆ ಎಂದಿನಿಂದ ಸೌಲಭ್ಯವನ್ನು ಒದಗಿಸಿಕೊಡಲಾಗುವುದು;

ಇಲ್ಲಿಯವರೆಗೆ 1623 ಕೊಳಚೆ ಪ್ರದೇಶದ ನಿವಾಸಿಗರಿಗೆ ಮನೆಗಳನ್ನು ಒದಗಿಸಿಕೊಡಲಾಗಿದೆ. ಉಳಿದವರಿಗೆ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (ಐ.ಹೆಚ್.ಎಸ್.ಡಿ.ಪಿ) ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಸೌಲಭ್ಯವನ್ನು ಒದಗಿಸಿಕೊಡಲಾಗುವುದು.

ಇ ಮಂಡ್ಯ ನಗರ ಆಸ್ಪತ್ರೆಯ ಪಕ್ಕದ ಕೊಳಚೆ ಪ್ರದೇಶದ ಬೆಂಕಿ ಅನಾಹುತಕ್ಕೆ ಒಳಗಾಗಿ ಮನೆಗಳನ್ನು ಕಳೆದುಕೊಂಡ ಅವರಿಗೆ ಸರ್ಕಾರ ನೀಡಿದ ಪರಿಹಾರ ಮತ್ತು ನೆರವಿನ ಕ್ರಮಗಳೇನು;

ಮಂಡ್ಯ ನಗರಸಭೆ ಮತ್ತು ಮಂಡ್ಯ ಜಿಲ್ಲಾಡಳಿತ ವತಿಯಿಂದ ಬೆಂಕಿ ಅನಾಹುತಕ್ಕೆ ಒಳಗಾಗಿ ಮನೆಗಳನ್ನು ಕಳೆದುಕೊಂಡ ನಿವಾಸಿಗಳಿಗೆ ತಕ್ಷಣಕ್ಕೆ ಅಗತ್ಯವಿದ್ದ ತಾತ್ಕಲಿಕ ಷೆಡ್, ಊಟ ಮತ್ತು ಪ್ರತಿ ಗುಡಿಸಲು ವಾಸಿಗಳಿಗೆ 200 ಪರಿಹಾರವನ್ನು ಒದಗಿಸಲಾಗಿರುತ್ತದೆ.

ಈ ಅನಾಹುತಕ್ಕೊಳಗಾಗಿದ್ದ ಸಾವಿರಾರು ಕುಟುಂಬಗಳಿಗೆ ವಸತಿ ಸೌಲಭ್ಯ ಒದಗಿಸಿ ಕೊಡಲು ಸರ್ಕಾರದ ತುರ್ತು ಕ್ರಮಗಳೇನು?

ಬೆಂಕಿ ಅನಾಹುತಕ್ಕೆ ಒಳಗಾಗಿ ಗುಡಿಸಲು ಕಳೆದುಕೊಂಡ ನಿವಾಸಿಗಳಿಗೆ ಕೇಂದ್ರ ಪುರಸ್ಕೃತ ಜನಹರಲಾಲ್ ನೆಹರು ನಗರ ನವೀಕರಣ ಯೋಜನೆಯ (ಜೆ.ಎನ್.ಎನ್.ಯು.ಆರ್.ಎಂ) ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ

(ಐ.ಹೆಚ್.ಎಸ್.ಡಿ.ಪಿ) ಯೋಜನೆಯಡಿ 558 ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯ ಒದಗಿಸುವ ರೂ.15.44 ಕೋಟಿ ವೆಚ್ಚದ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಪರಿಶೀಲನೆಗೆ ಹಾಗೂ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಅನುಮೋದನೆ ದೊರೆತ ನಂತರ ವಸತಿ ಸೌಲಭ್ಯ ಕಲ್ಪಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(472)343**
ಸದಸ್ಯರ ಹೆಸರು	:	**ಶ್ರೀ. ಶ್ರೀನಿವಾಸ್ ಎಂ.**
ಉತ್ತರಿಸಬೇಕಾದ ಸಚಿವರು	:	**(ಶ್ರೀ ಅರವಿಂದ ಲಿಂಬಾವಳಿ)**
		ಉನ್ನತ ಶಿಕ್ಷಣ ಸಚಿವರು

ಅ) ರಾಜ್ಯದಲ್ಲಿರುವ ಜಿಲ್ಲಾವಾರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು; ಇನ್ನೂ ಎಷ್ಟು ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೆ? ಇದ್ದಲ್ಲಿ ಆ ಕುರಿತು ವಿವರಗಳೇನು;

349 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಂತಹ ಯಾವುದೇ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳನ್ನುಹೆಚ್ಚಾಗಿ ಹೊಂದಿದ್ದು, ಹೋಬಳಿ ಕೇಂದ್ರಗಳಲ್ಲಿ ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಮುಂದಾಗುವುದೇ;

ಸದರಿ ಜಿಲ್ಲೆಯಲ್ಲಿ ಒಟ್ಟು 15 ಮಂದಿ ಕಾಲೇಜುಗಳಿವೆ. ಉಳಿದ ಹೋಬಳಿ ಕೇಂದ್ರದಲ್ಲಿ ಪದವಿ ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ

ಇ) ಮಂಡ್ಯ ತಾಲ್ಲೂಕು ಬಸರಾಳು ಹೋಬಳಿ ಕೇಂದ್ರವಾಗಿದ್ದು, ಪದವಿ ಕಾಲೇಜಿಗಾಗಿ ಕನಿಷ್ಠ 30 ಕಿ.ಮೀ.ಗಳಷ್ಟು ದೂರ ಹೋಗಬೇಕಾಗಿದ್ದು, ಗ್ರಾಮಾಂತರ ಪ್ರದೇಶಗಳ ಮಕ್ಕಳು ಈ ಕಾರಣಕ್ಕಾಗಿ ಕಾಲೇಜು ಶಿಕ್ಷಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲದ ಕಾರಣ ಮುಂಬರುವ ಶೈಕ್ಷಣಿಕ ವರ್ಷದಲ್ಲಾದರೂ ಪದವಿ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಪರಿಶೀಲಿಸಲಾಗುವುದು.